ಕೆಂಪು ಕೆಂಪಾಗಿ ಪ್ರಜ್ಞೆ ತಪ್ಪಿ ಬಿದ್ದರು. ಪುಣ್ಯಕ್ಕೆ ಮಗ ಸೊಸೆ ಎಲ್ಲ ಮನೆಯಲ್ಲಿಯೇ ಇದ್ದವರು ಅವರನ್ನು ಆಸ್ಪತ್ರೆಗೆ ಹಾಕಿದರು. ಪುಣ್ಯಕ್ಕೆ ಅದು ಕೊರೊನಾ ಆಗಿರ್ಲಿಲ್ಲ, 'ಅವರ ಶ್ವಾಸಕೋಶ ವೀಕ್ ಆಗಿದೆ. ಬ್ರೀತ್ ಇನ್ ಆಗ್ತದೆ. ಆದ್ರೆ ಬ್ರೀತ್ ಔಟ್ ಸರಿಯಾಗಿ ಆಗದೆ ಲಂಗ್ಸ್‌ನಲ್ಲಿ ಕಾರ್ಬನ್ ಕಟ್ಟಿ ಸಮಸ್ಯೆ ಆಗ್ತಾ ಇದೆ' ಅಂತ ಡಾಕ್ಟರ್ ಹೇಳಿದ್ರು.

ಐಸಿಯೂನಲ್ಲಿ ನಾಕಾರು ದಿನ ಇದ್ದು ವಾರ್ಡಿಗೆ ಬಂದು ಅಲ್ಲಿ ಸಾ ಹತ್ತು ಹದಿನೈದು ದಿನ ಇದ್ದು ಮನೆಗೆ ಬಂದರು. ಆವತ್ತಿಂದ ರಾಯರ ದಿನಚರಿಯೇ ಬೇರೆ ಆಯಿತು. ವರ್ಷ ಎಂಬತ್ತೆರಡಾದರೂ ಲಟ್ಟ ಜೀವವಾಗಿದ್ದ ಅವರು ಆಸ್ಪತ್ರೆಯಿಂದ ಬರುವಾಗ ಎದ್ದು ಓಡಾಡ್ಲಿಕ್ಕೆ ಆಗದ ಸ್ಥಿತಿ ತಲುಪಿದ್ದರು. ಓಡಾಡ್ಲಿಕ್ಕೆ ಯಾರಾದರೂ ಕೈ ಹಿಡಿಯುವಂಥ ಸ್ಥಿತಿ ಬಂತು. ಮಗಳು ಒಂದು ತಿಂಗಳು ರಜೆ ಹಾಕಿ ರಾಯರ ಸೇವೆ ಮಾಡಿದಳು. ಉಸಿರಾಟದ ಸಮಸ್ಯೆ ಸರಿ ಮಾಡ್ಲಿಕ್ಕೆ ಅಂತ ಆಕ್ಸಿಜನ್ ಕಾನ್ಸನ್‌ಟ್ರೇಟರ್, ಬೈಪ್ ಆ್ಯಪ್ ಮೆಷೀನ್ ಎಲ್ಲ ಮಗ, ಮಗಳು ಖರ್ಚು ಹಾಕಿ ತರಿಸಿದರು. ಆರಾಮಾಗಿ ಆಚೆ ಈಚೆ ಓಡಾಡಿಕೊಂಡಿದ್ದ ರಾಯರಿಗೆ ಈಗ ಮತ್ತಷ್ಟು ಮೂಗುದಾರ ಹಾಕಿದ ಹಾಗೆ ಆಯಿತು. ದಿನದ ಹೆಚ್ಚಿನ ಭಾಗ ಮಲಗಿಕೊಂಡೇ ಇರುವಂತೆ ಆಗಿತ್ತು. ನಾಕಾರು ತಿಂಗಳ ಔಷಧ ಉಪಚಾರ ಎಲ್ಲ ಆದ ನಂತರ ಒಂದು ಹಂತಕ್ಕೆ ರಾಯರು ಗಟ್ಟಿ ಆದ್ರು ಅಂತ ಆಯಿತು.

ಒಂದು ವರ್ಷ ಆಗ್ಲಿಲ್ಲ ಇದೆಲ್ಲ ಆಗಿ, ಮತ್ತೆ ರಾಯರ ಆರೋಗ್ಯ ಬಿಗಡಾಯಿಸಿತು. ಹಿಂದಿನ ವರ್ಷ ಕಾಣಿಸಿಕೊಂಡ ತೊಂದರೆಯೇ ಮತ್ತೆ ಕಾಣಿಸಿಕೊಂಡಿತು. 'ನಿಮ್ಮ ತಂದೆಯವರ ಲಂಗ್ಸ್ ಪೂರ್ತಿ ವೀಕ್ ಆಗಿದೆ. ಅವರನ್ನು ಪೂರ್ತಿಯಾಗಿ ಗುಣ ಮಾಡಲಿಕ್ಕೆ ಸಾಧ್ಯ ಇಲ್ಲ. ಇನ್ನು ಏನಿದ್ರೂ ಈ ಕೇಸ್ ಹೀಗೇ. ಪದೇಪದೇ ಐಸೀಯೂಗೆ ಬರ್ತಾ ಇರಬೇಕಾಗ್ತದೆ. ನಮ್ಮಿಂದ ಎಷ್ಟು ಕ್ಯೂರ್ ಮಾಡಬಹುದೋ ಅಷ್ಟು ಮಾಡಿಕೊಡ್ತೇನೆ' ಅಂತ ಛೀಫ್ ಡಾಕ್ಟರು ಹೇಳಿದರು. 'ಐಸೀಯೂನಲ್ಲಿ ಪೇಷೆಂಟ್ ಹಾಕಿದ ನಂತರ ಯಾರಾದ್ರೂ ಪೇಷೆಂಟ್ ಕಡೆಯವರು ರಾತ್ರಿ ಹಗಲು ಇರ್ಲೇಬೇಕು. ಯಾವುದೇ ಕಾರಣಕ್ಕೂ ಬಿಟ್ಟು ಹೋಗ್ಲಿಕ್ಕೆ ಸಾಧ್ಯ ಇಲ್ಲ. ಲಾಸ್ಟ್ ಟೈಂ ನೀವು ಮನೆಗೆ ಹೋಗ್ತಿದ್ರಿ. ಆದ್ರೆ ಈ ಸರ್ತಿ ಹಾಗೆ ಆಗೂದಿಲ್ಲ. ಹಾಸ್ಪಿಟಲ್‌ನ ರೂಲ್ಸ್ ಎಲ್ಲ ಛೇಂಜ್ ಆಗಿದೆ' ಎಂದರು ಐಸೀಯೂ ನೋಡಿಕೊಳ್ಳುತ್ತಿದ್ದ ಛೀಫ್ ಡಾಕ್ಟರು. ಮಗ, ಸೊಸೆ ಎಲ್ಲರ ಮುಖ ಕಪ್ಪಾಯಿತು ಆ ಮಾತು ಕೇಳಿ. ರಾಯರ ಮಗಳು ಸುದ್ದಿ ಗೊತ್ತಾದರೂ 'ನಂಗೆ ಈಗ ಬರ್ಲಿಕ್ಕೆ ಆಗೂದಿಲ್ಲ. ಮಕ್ಕಳಿಗೆ ಪರೀಕ್ಷೆ, ನಂಗೆ ಸಾ ಆಫೀಸಿನಲ್ಲಿ ಬ್ಯುಸಿ. ಹೇವೀ ವರ್ಕ್' ಅದು ಇದು ಅಂತೆಲ್ಲ ಸಬೂಬು ಹೇಳಿದ್ದಳು.

ಮೊದಲ ಸರ್ತಿ ರಾಯರು ಆಸ್ಪತ್ರೆಯಲ್ಲಿ ಇದ್ದಾಗ ಸೇವೆಗೆ ಅಂತ ಬಂದವಳೇ,'ಅಮ್ಮನ ಬಂಗಾರ ಎಲ್ಲ ಎಲ್ಲಿ ಉಂಟು? ಬಳೆ ಜುಮುಕಿ ಎಲ್ಲ ಜಾಗ್ರತೆ ಇಟ್ಟಿದ್ದೀಯಾ?' ಅಂತೆಲ್ಲ ಅಣ್ಣನ ಬಳಿ ಕೇಳಿದ್ದಳು. ಅದನ್ನು ಕೇಳಿ ಸೊಸೆ, 'ಹೌದೌದು ಎಲ್ಲ ನಾವು ನುಂಗ್ತೇವಾ? ನಮಿಗೆಂತಕ್ಕೆ ಇವ್ರದ್ದು. ಯಾರಿಗೆ ಎಷ್ಟು ಇದ್ರೇನಾಯಿತು? ಇನ್ನಷ್ಟು ಬೇಕು ಮತ್ತಷ್ಟು ಬೇಕು ಅನ್ನುವ ಆಂಕ್ರ ಹೋಗೂದೆ ಇಲ್ಲ. ಅತ್ತೆಯ ಬಂಗಾರ ಎಲ್ಲ ಎಲ್ಲಿ ಉಂಟು ಎಷ್ಟು ಉಂಟು ಅದನ್ನೆಲ್ಲ ಪೂರ ಹೇಳಿಬಿಡಿ. ನಮಿಗೆಂತಕ್ಕೆ ಕಂಡವರದ್ದು?' ಅಂತ ಕುಚ್ಚಣಿಸಿ ಮಾತಾಡಿದ್ದಳು. ರೂಮಿನಲ್ಲಿದ್ದ ರಾಯರು ಗಂಡ ಹೆಂಡತಿಗೆ ಈ ಎಲ್ಲ ಮಾತುಗಳು ಕೇಳಿದ್ದವು. ಏನೂ ಹೇಳ್ಳಿಕ್ಕಾಗದೆ ಕಣ್ಣಲ್ಲಿ ನೀರು ತುಂಬಿಕೊಂಡಿದ್ದರು ಗಂಡ ಹೆಂಡತಿ, ಅಷ್ಟೇ. 'ಆವತ್ತು ಚಿನ್ನದ ವಿಲೇವಾರಿ ಆಗದೇ ಇದ್ದದ್ದರಿಂದ ಈ ಸರ್ತಿ ಬರದೇ ಕೈ ಕೊಟ್ಟಳು ನಿಮ್ಮ ತಂಗಿ' ಅಂತ ಹೆಂಡತಿ ಹಂಗಿಸಿದಾಗ ರಾಯರ ಮಗ ಏನೂ ಹೇಳದೇ ಸುಮ್ಮನೇ ನಿಂತಿದ್ದ. 'ಅದೆಲ್ಲ ಹೋಗಲಿ, ಈಗ ಆಸ್ಪತ್ರೆಯಲ್ಲಿ ಹಗಲು ರಾತ್ರಿ ಇರೂದು ಯಾರು? ನಂಗೆಸಾ ಆಗೂದಿಲ್ಲ. ನಿಂಗೆ ಸಾ ಆಗೂದಿಲ್ಲ. ನಾವಿಬ್ರೂ ಆಫೀಸಿಗೆ ಹೋಗ್ಲೇ ಬೇಕು. ಈಗ ವರ್ಕ್ ಫ್ರಂ ಹೋಮ್ ತೆಗೆದಿದ್ದಾರೆ. ಒಂದೆರಡು ದಿನ ಆದ್ರೆ ಹೇಗಾದ್ರೂ ಎಡ್ಜಸ್ಟ್ ಮಾಡಬಹುದು. ಇದು ಎಷ್ಟು ದಿನ ಅಂತ ಹೇಳ್ಳಿಕ್ಕೇ ಬರೂದಿಲ್ಲ ಅಂತ ಡಾಕ್ಟ್ರು ಹೇಳ್ತಾ ಇದ್ದಾರೆ' ಅಂತ ಮಗ ಸೊಸೆ ಮಾತಾಡಿಕೊಳ್ತಾ ಇದ್ದರು.

ಅಷ್ಟು ಹೊತ್ತಿಗೆ ದೇವರೇ ಹೇಳಿ ಕಳಿಸಿದ್ದೋ ಎನ್ನುವ ಹಾಗೆ ಗಣಪಯ್ಯ ಮೇಷ್ಟ್ರು ರಾಯರ ಮಗನ ಮೊಬೈಲಿಗೆ ಕಾಲ್ ಮಾಡಿದ್ದರು. 'ಗೋವಿಂದ ರಾಯರು ಹೇಗಿದ್ದಾರೆ? ಅವರ ಮೊಬೈಲಿಗೆ ಕಾಲ್ ಮಾಡಿದ್ರೆ ಯಾರು ಸಾ ತೆಗೊಳ್ತಾ ಇಲ್ಲ. ಯಾಕೆ?